6	ಸಂಪ್ರದಾಯ ಮತ್ತು ಅಸಂಪ್ರದಾಯ ಮೂಲಗಳಿಂದ (ಖಾಸಗಿ ವಿದ್ಯುತ್ ಉತ್ಪಾದಕರಿಂದ)	12.306
	ಒಟ್ಟು	**100.568**

ಇ) ಮತ್ತು ಈ).

ಹೌದು, ರಾಜ್ಯಕ್ಕೆ ಪೀಕ್ ಲೋಡ್ ಸಮಯದಲ್ಲಿ ಕೆ.ಪಿ.ಸಿ.ಎಲ್., ಕೇಂದ್ರೀಯ ವಿದ್ಯುತ್ ಉತ್ಪಾದನಾ ಘಟಕಗಳು ಮತ್ತು ಎಲ್ಲಾ ಖಾಸಗೀ ವಿದ್ಯುತ್ ಉತ್ಪಾದಕರುಗಳಿಂದ ಲಭ್ಯವಾಗುವ ಸುಮಾರು 5429 ಮೆ.ವಾಟ್ ವಿದ್ಯುತ್‌ನ ಜೊತೆಗೆ ದಿನೇ ದಿನೇ ಹೆಚ್ಚುತ್ತಿರುವ ರಾಜ್ಯದ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಪವರ್ ಟ್ರೇಡಿಂಗ್ ಕಾರ್ಪೊರೇಷನ್‌ನ್ನಿಂದ (ಪಿ.ಟಿ.ಸಿ) 117 ಮೆಗಾ ವಾಟ್ಸ್ ಮತ್ತು ನ್ಯಾಷನಲ್ ವಿದ್ಯುತ್ ವ್ಯಾಪಾರ ನಿಗಮ್ ಲಿಮಿಟೆಡ್‌ನ್ನಿಂದ (ಎನ್.ವಿ.ವಿ.ಎನ್.ಎಲ್) 100ಮೆಗಾವಾಟ್ಸ್ – ಈ ಎರಡೂ ಸಂಸ್ಥೆಗಳಿಂದ ಒಟ್ಟು 217 ಮೆ.ವ್ಯಾಟ್‌ನಷ್ಟು ವಿದ್ಯುತ್ತನ್ನು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

671(1473) ಶ್ರೀ ಡಾ. ಅನ್ನದಾನಿ ಕೆ. (ಮಳವಳ್ಳಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಕೊಳ್ಳೇಗಾಲ ತಲ್ಲೂಕಿನ ಕಾವೇರಿನದಿ ಪಾತ್ರದಲ್ಲಿ ಯಾವ ಯಾವ ಖಾಸಗಿ ಜಲವಿದ್ಯುತ್ ಕಂಪನಿಗಳಿಗೆ ಜಲವಿದ್ಯುತ್ ತಯಾರಿಕಾ ಘಟಕವನ್ನು ಸ್ಥಾಪಿಸಲು ಅನುಮತಿ ನೀಡಲಾಗಿದೆ ಹಾಗೂ ಅವುಗಳ ವಿವರಗಳೇನು:

ಆ) ಅನುಮತಿ ಕೋರಿ ಬಂದ ಮನವಿಗಳು ಎಷ್ಟು:

ಇ) ಅನುಮತಿ ನೀಡುವಲ್ಲಿ ಅನುಸರಿಸಿದ ಮಾನದಂಡಗಳೇನು;

ಈ) ಈ ಪ್ರದೇಶದಲ್ಲಿ ಜಲವಿದ್ಯುತ್ ಘಟಕಗಳನ್ನು ಸ್ಥಾಪಿಸುವುದರಿಂದ ಉಂಟಾಗಬಹುದಾದ ನೈಸರ್ಗಿಕ ಏರು ಪೇರುಗಳ ಕುರಿತು ಸರಕಾರ ಸಮಗ್ರ ಪರಿಶೀಲನೆ ನಡೆಸಿದೆಯೇ;

ಉ) ಹೌದಾದಲ್ಲಿ ಪರಿಶೀಲನೆಯ ವಿವರಗಳೇನು;

ಊ) ಭರಚುಕ್ಕಿ ಬಳಿ ಸ್ಥಾಪಿಸಲುದ್ದೇಶಿಸಿರುವ ವಿದ್ಯುತ್ ಘಟಕದಿಂದ ಉಂಟಾಗಬಹುದಾದ ಅನಾಹುತಗಳ ಬಗ್ಗೆ ಸರಕಾರದ ನಿಲುವುಗಳೇನೆ;

ಋ) ಈ ಯೋಜನೆಗಾಗಿ ಕಂಪನಿಗೆ ನೀಡಿದ ಅರಣ್ಯ ಭೂಮಿ ಮತ್ತು ಸರಕಾರಿ ಭೂಮಿಯ ವಿಸ್ತೀರ್ಣವೇನು (ವಿವರಗಳನ್ನು ನೀಡುವುದು)

ಋೂ) ಅಮೂಲ್ಯ ನಿಸರ್ಗ ಸಂಪತ್ತನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಭರಚುಕ್ಕಿ ಬಳಿ ಸ್ಥಾಪಿಸಲುದ್ದೇಶಿಸಿರುವ ಮಿನಿ ಹೈಡಲ್ ಪ್ರಾಜೆಕ್ಟನ್ನು ಕೈಬಿಡಲು ಸರಕಾರ ಮುಂದಾಗುವರೇ;

ಶ್ರೀ ಹೆಚ್. ಡಿ. ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಕೊಳ್ಳೆಗಾಲ ತಾಲ್ಲೂಕಿನ ಕಾವೇರಿ ನದಿ ಪಾತ್ರದಲ್ಲಿ ಕಿರುಜಲ ವಿದ್ಯುತ್ ತಯಾರಿಕಾ ಘಟಕವನ್ನು ಸ್ಥಾಪಿಸಲು ಅನುಮತಿ ನೀಡಲಾದ ಖಾಸಗಿ ಜಲವಿದ್ಯುತ್ ಕಂಪನಿಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಅನುಮತಿ ಕೋರಿ ಬಂದ ಮನವಿಗಳು ಒಟ್ಟು 12

ಇ) 1. ಹಂಚಿಕೆಗಾಗಿ ಬಂದ ಎಲ್ಲಾ ಯೋಜನೆಗಳು ಸ್ವಸಂಶೋಧಿತ ಯೋಜನೆಗಳಾಗಿರುವುದರಿಂದ, ಪ್ರಸ್ತಾವಿತ ಯೋಜನೆಗಳ ಬಗ್ಗೆ ಸರಿಯಾದ ತಾಂತ್ರಿಕ ವಿವರಗಳನ್ನು ಒಳಗೊಂಡ ಪಿ.ಎಫ್.ಆರ್ ವರದಿಯನ್ನು, ಆರ್ಥಿಕ ಸಮರ್ಪಕತೆಯನ್ನು ನೀಡಿದ ಕಂಪನಿಗಳ ಅರ್ಜಿಯನ್ನು ಹಂಚಿಕೆ ಸಮಿತಿಯು ಪರಿಶೀಲಿಸಿ ಹಂಚಿಕೆ ಮಾಡುತ್ತದೆ.

2. ಒಂದೇ ಯೋಜನೆಗೆ ಒಂದಕ್ಕಿಂತ ಹೆಚ್ಚು ಕಂಪನಿಗಳು ಅರ್ಜಿಯನ್ನು ಸಲ್ಲಿಸಿದಲ್ಲಿ ಮೊದಲು ಅರ್ಜಿಯನ್ನು ಸಲ್ಲಿಸಿದ ಕಂಪನಿಗೆ ಮೊದಲ ಆದ್ಯತೆಯನ್ನು ನೀಡಿ ಹಂಚಿಕೆ ಮಾಡಲಾಗುವುದು.

ಈ) ಕಿರುಜಲ ವಿದ್ಯುತ್ ಯೋಜನೆಗಳು ಪರಿಸರ ಸ್ನೇಹಿಯಾಗಿದ್ದು, ಹಸಿರು ಶಕ್ತಿಯಾದುದರಿಂದ ಅಸಂಪ್ರದಾಯಿಕ ಯೋಜನೆಗಳೆಂದು ಪರಿಗಣಿಸಲಾಗಿದೆ. ಈ ಯೋಜನೆಗಳಿಗಾಗಿ, ಇದ್ದ ಆಣೆಕಟ್ಟನ್ನಾಗಲಿ ಅಥವಾ ಕಾಲುವೆಗಳಲ್ಲಿ ಎತ್ತರವನ್ನು ಉಪಯೋಗಿಸಿಕೊಳ್ಳಲಾಗುತ್ತದೆ. ನದಿ/ಹೊಳೆಯ ಪಾತ್ರದಲ್ಲಿ ಎತ್ತರವು ಲಭ್ಯವಿದ್ದಲ್ಲಿ ಚಿಕ್ಕ ಒಡ್ಡನ್ನು ಕಟ್ಟಿ ನೀರನ್ನು ತಿರುವು ನಾಲೆಗಳ ಮೂಲಕ ತಿರುಗಿಸಿ ವಿದ್ಯುತ್ ಉತ್ಪಾದಿಸಿ ತಿರುಗಿ ಹೊಳೆಗೇ ಬಿಡಲಾಗುತ್ತದೆ. ಇಂತಹ ಯೋಜನೆಗಳಲ್ಲಿ ನೀರನ್ನು ಹಿಡಿದಿಟ್ಟುಕೊಳ್ಳಲು ಆಸ್ಪದವಿರದೇ ಇದ್ದ ಕಾರಣ ನೈಸರ್ಗಿಕ ಏರು ಪೇರುಗಳಾಗುವ ಯಾವುದೇ ಸಾಧ್ಯತೆಗಳು ಇರುವುದಿಲ್ಲ. ಆದರೂ ಈ ಯೋಜನೆಗಳ ವಿವರವಾದ ತಾಂತ್ರಿಕ ವರದಿಗೆ ಸಂಬಂಧಿತ ನೀರಾವರಿ, ಅರಣ್ಯ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಕೆ.ಪಿ.ಟಿ.ಸಿ.ಎಲ್, ಕೆ.ಪಿ.ಸಿ.ಎಲ್, ಕೆ.ಆರ್.ಇ.ಡಿ.ಎಲ್ ಸಂಸ್ಥೆಗಳಿಂದ ಅನುಮೋದನೆ ಪಡೆದುಕೊಂಡ ನಂತರ ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗುತ್ತದೆ. ಈ ಅನುಮೋದನೆ ಪತ್ರದಲ್ಲಿ ಈ ಯೋಜನೆಯಿಂದ ಯಾವುದೇ ತೊಂದರೆಯಾಗದಂತೆ ಯೋಜನೆಯನ್ನು ಅನುಷ್ಠಾನಗೊಳಿಸಲು ಷರತ್ತುಗಳನ್ನು ಅಳವಡಿಸಲಾಗಿರುತ್ತದೆ.

ಉ) ಕಿರುಜಲ ವಿದ್ಯುತ್ ಯೋಜನೆಗಳು ಪರಿಸರ ಸ್ನೇಹಿಯಾಗಿರುವುದು ಅಲ್ಲದೇ, ಅಸಂಪ್ರದಾಯಿಕ ಇಂಧನದ ಅಂಗವಾಗಿರುವುದರಿಂದ ಇಂತಹ ಯಾವುದೇ ಸಮಸ್ಯೆಗಳು ಉದ್ಭವಿಸುವುದಿಲ್ಲ.

ಊ) ಭರಚುಕ್ಕಿ ೭೪ ಸ್ಥಾಪಿಸಲುದ್ದೇಶಿಸಿರುವ ವಿದ್ಯುತ್ ಘಟಕಕ್ಕೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನೀರಾವರಿ ಇಲಾಖೆಗಳಿಂದ ಅನುಮೋದನೆ ದೊರಕಿವೆ. ಕಿರುಜಲ ವಿದ್ಯುತ್ ಯೋಜನೆಗಳು ಪರಿಸರ ಸ್ನೇಹಿಯಾರಿರುವುದು ಅಲ್ಲದೇ, ಅಸಂಪ್ರದಾಯಿಕ ಇಂಧನದ ಅಂಗವಾಗಿರುವುದರಿಂದ ಇಂತಹ ಯಾವುದೇ ಸಮಸ್ಯೆಗಳು ಉದ್ಭವಿಸುವುದಿಲ್ಲ.

ಋ) ಈ ಯೋಜನೆಗಾಗಿ ಬೇಕಾಗಿರುವ 19.64 ಎಕರೆ ಕಂದಾಯ ಭೂಮಿಯಲ್ಲಿ 9.64 ಎಕರೆ ಭೂಮಿಯನ್ನು ಸರ್ಕಾರವು ಮಂಜೂರು ಮಾಡಿ ಕಂಪನಿಗೆ ಉಪಗುತ್ತಿಗೆಗೆ ನೀಡಿದೆ ಆದರೆ ಇನ್ನೂ 10 ಎಕರೆ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಯ ನಿರಾಪೇಕ್ಷಣೆಗಾಗಿ ಕಾಯ್ದಿದೆ.

ಋ) ಕಿರುಜಲ ವಿದ್ಯುತ್ ಯೋಜನೆಗಳು ಪರಿಸರ ಸ್ನೇಹಿಯಾಗಿರುವುದು ಅಲ್ಲದೇ, ಅಸಂಪ್ರದಾಯಿಕ ಇಂಧನದ ಅಂಗವಾಗಿರುವುದರಿಂದ ಇಂತಹ ಯಾವುದೇ ಸಮಸ್ಯೆಗಳು ಉದ್ಭವಿಸುವುದಿಲ್ಲ. ಆದರೂ ಈ ಯೋಜನೆಗೆ ಅನುಮೋದನೆಗಳನ್ನು ನೀಡುವಾಗ ಸಂಬಂಧಿತ ಇಲಾಖೆಗಳು ಹಾಕಿದ ಷರತ್ತುಗಳನ್ನು ಅಭಿವೃದ್ದಿದಾರರು ಯೋಜನಾ ಅನುಷ್ಠಾನ ಮಾಡುವಾಗ ಆಗಲಿ ಅಥವಾ ಅನುಷ್ಠಾನ ಮಾಡಿದ ಮೇಲೂ ಆಗಲಿ ಉಲ್ಲಂಘಿಸಿದಲ್ಲಿ ಯಾವುದೇ ಹಂತದಲ್ಲಿ ಈ ಯೋಜನೆಯ ಹಂಚಿಕೆಯನ್ನು ರದ್ದುಪಡಿಸಲು ಸರ್ಕಾರ ಸಮರ್ಥವಾಗಿದೆ.

ಅನುಬಂಧ

ಚಾಮರಾಜನಗರ ಜಿಲ್ಲೆ, ಕೊಳ್ಳೆಗಾಲ ತಾಲ್ಲೂಕಿನಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಹಂಚಿಕೆ ಕೋರಿ ಬಂದ ಯೋಜನೆಗಳ ವಿವರ

ಕ್ರಮ ಸಂಖ್ಯೆ	ಅಭಿವೃದ್ಧಿದಾರರು	ಸ್ಥಳ	ಸಾಮರ್ಥ್ಯ ಮೆ.ವ್ಯಾ	ಷರಾ
1	ಎಸ್.ಎಲ್.ಎಸ್ ಪವರ್ ಇಂಡಸ್ಟ್ರೀ ಲಿ., #700ಮ 2ನೇ ಸಿ ಅಡ್ಡರಸ್ತೆ, 9ನೇ ಮುಖ್ಯ ರಸ್ತೆ, 3ನೇ ಬ್ಲಾಕ್, 3ನೇ ಹಂತ, ಬಸವೇಶ್ವರ ನಗರ ಬೆಂಗಳೂರು – 560 079.	ಚಾಮರಾಜ ನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಸತ್ತೇಗಾಲ ಗ್ರಾಮದ ಬಳಿ ಕಾವೇರಿ ನದಿಯ 2 ಕಿ.ಮೀ ಕೆಳತೊರೆಯಲ್ಲಿ,	4.00	ಡಿಇ 32ಎನ್.ಸಿ.ಇ 2002 ದಿನಾಂಕ 13.06.2002
2	ಚಾಣಕ್ಯ ಸಿಮೆಂಟ್ಸ್ ಲಿ., # 2629, 17ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ, ಹೆಚ್.ಎ.ಎಲ್ 2ನೇ ಹಂತ, ಬೆಂಗಳೂರು – 560008.	ಚಾಮರಾಜನಗರ ಜಿಲ್ಲೆಯ ಬೂದಿಕಟ್ಟೆ ಗ್ರಾಮದ ಬಳಿ ರಂಗನಾಥಸ್ವಾಮಿ ಆಣೆಕಟ್ಟಿಗೆ ಅಡ್ಡಲಾಗಿ ಕಾವೇರಿ ನದಿಯ 2 ಕಿ.ಮೀ. ಮೇಲ್ತ್ತೋರೆಯಲ್ಲಿ	2.00	ಡಿಇ 33ಎನ್.ಸಿ.ಇ 2002 ದಿನಾಂಕ 13.06.2002
3	ಚಾಣಕ್ಯ ಸಿಮೆಂಟ್ಸ್ ಲಿ., (ಪಯೋನಿರ್ ಪವರ್ ಕಾರ್ಪೊರೇಷನ್ ಲಿ.,) # 2629, 17ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ, ಹೆಚ್.ಎ.ಎಲ್ 2ನೇ ಹಂತ, ಬೆಂಗಳೂರು – 560 008.	ಚಾಮರಾಜ ನಗರ ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನ ಬುದಿಕಟ್ಟೆ ಗ್ರಾಮದ ಬಳಿ ಶಿವನಸಮುದ್ರಂ ಜಲಾಪಾತದ ಬಳಿ ಕಾವೇರಿ ನದಿಯ ಕೆಳತೊರೆಯಲ್ಲಿ	2.00	ಡಿಇ 34ಎನ್.ಸಿ.ಇ 2002 ದಿನಾಂಕ 13.06.2002.

4	ಶಿವನಸಮುದ್ರಂ ಪವರ್ ಪ್ರೈ.ಲಿ., # 5/10, 2ನೇ ಕ್ರಾಸ್, ನೆಹರು ನಗರ, ಬೆಂಗಳೂರು–560 020.	ಕಾವೇರಿ ನದಿಯ ಬಲದಂಡೆ ಕಾಲುವೆಗೆ ಅಡ್ಡಲಾಗಿ ಗಗನಚುಕ್ಕಿ ಜಲಾಶಯದಲ್ಲಿ ಗಗನಚುಕ್ಕಿ ಸ್ಕೀಮ್–1	4.00	ಡಿಇ 70 ಎನ್.ಸಿ.ಇ 2002 ದಿನಾಂಕ 11.7.2002
5	ಶಿವನಸಮುದ್ರಂ ಪವರ್ ಪ್ರೈ. ಲಿ., # 5/10, 2ನೇ ಕ್ರಾಸ್, ನೆಹರು ನಗರ, ಬೆಂಗಳೂರು–560 020	ಕಾವೇರಿ ನದಿಯ ಬಲದಂಡೆ ಕಾಲುವೆಗೆ ಅಡ್ಡಲಾಗಿ ಗಗನಚುಕ್ಕಿ ಜಲಾಶಯದಲ್ಲಿ ಗಗನಚುಕ್ಕಿ ಸ್ಕೀಮ್–2	4.00	ಡಿಇ 70 ಎನ್.ಸಿ.ಇ 2002 ದಿನಾಂಕ 11.7.2002
6	ಇಂದ್ರಧನುಷ್ ಪವರ್ ಪ್ರೈ. ಲಿ., #5/10, 2ನೇ ಅಡ್ಡರಸ್ತೆ, ನೆಹರು ನಗರ, ಬೆಂಗಳೂರು–560 020	ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನ ಧನಗೆರೆ ಬಲದಂಡೆ ಕಾಲುವೆಯಲ್ಲಿ	2.00	ಡಿಇ 71 ಎನ್.ಸಿ.ಇ. 2002 ದಿನಾಂಕ15.7.2002
7	ಬಾಲಾಜಿ ಪವರ್ ಪ್ರೈ. ಲಿ., ನಂ. 44, ರೇಸ್ ಕೋರ್ಸ ರಸ್ತೆ, ಬೆಂಗಳೂರು–560 001.	ಚಾಮರಾಜ ನಗರ ಜಿಲ್ಲೆಯ, ಕೊಳ್ಳೆಗಾಲ ತಾಲ್ಲೂಕಿನ ಧನಗೆರೆ ಆಣೆಕಟ್ಟಿಗೆ ಅಡ್ಡಲಾಗಿ	2.5	ಡಿಇ 125 ಎನ್.ಸಿ.ಇ 96(1) ದಿನಾಂಕ10.6.1997
8	ಎಸ್.ಎಲ್.ಎಸ್ ಪವರ್ ಇಂಡಸ್ಟ್ರೀಸ್ ಲಿ., # 700, 2ನೇ ಸಿ ಅಡ್ಡರಸ್ತೆ, 9ನೇ ಮುಖ್ಯ ರಸ್ತೆ, 3ನೇ ಬ್ಲಾಕ್, 3ನೇ ಹಂತ ಬಸವೇಶ್ವರನಗರ, ಬೆಂಗಳೂರು–560 079.	ಚಾಮರಾಜ ನಗರ ಜಿಲ್ಲೆಯ, ಕೊಳ್ಳೆಗಾಲ ತಾಲ್ಲೂಕಿನ ಧನಗೆರೆ ಆಣೆಕಟ್ಟಿಗೆ ಅಡ್ಡಲಾಗಿ	3.00	ಈ ಯೋಜನೆಯನ್ನು ಬಾಲಾಜಿ ಪವರ್ ಪ್ರೈ. ಲಿ., ಅವರಿಗೆ ಹಂಚಿಕೆ ಮಾಡಿದ್ದರಿಂದ ಈ ಹಂಚಿಕೆಯನ್ನು ತಿರಸ್ಕರಿಸಲಾಗಿದೆ.
9	ಮಸಾಲ ಪವರ್ ಪ್ರೊಜೆಕ್ಟ್ ಪ್ರೈ. ಲಿ., 1–4–908/ಸಿ, ಬಾಕ್ರಂ ರಸ್ತೆ, ಹೈದರಾಬಾದ್–500 048.	ಚಾಮರಾಜ ಜಿಲ್ಲೆ, ಕೊಳ್ಳೆಗಾಲ ತಾಲ್ಲೂಕು ಬುದಿಕಟ್ಟೆ ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಭರಚುಕ್ಕಿ ಜಲಾಶಯದ ಮೆಲ್‌ತೊರೆಯಲ್ಲಿ	2.00	ಕೆ.ಪಿ.ಸಿ.ಎಲ್ ನಮರು 240 ಮೆ.ವ್ಯಾ ಸಾಮರ್ಥ್ಯ ಜಲವಿದ್ಯುತ್ ಯೋಜನೆಯ ಪ್ರಸ್ತಾವನೆಯಿದ್ದುದರಿಂದ ಅರ್ಜಿಯನ್ನು ತಿರಸ್ಕರಿಸಲಾಯಿತು.

10	ಶಿವನಸಮುದ್ರಂ ಪವರ್ ಪ್ರೈ. ಲಿ., # 5/10, 2ನೇ ಕ್ರಾಸ್, ನೆಹರು ನಗರ, ಬೆಂಗಳೂರು–560 020	ಚಾಮರಾಜ ಜಿಲ್ಲೆ, ಕೊಳ್ಳೆಗಾಲ ತಾಲ್ಲೂಕು ಬುದಿಕಟ್ಟೆ ಗ್ರಾಮದ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಭರಚುಕ್ಕಿ ಜಲಾಶಯದ ಮೆಲ್‌ತೊರೆಯಲ್ಲಿ	2.00	
11	ಇಂದ್ರಧನುಷ್ ಪವರ್ ಪ್ರೈ. ಲಿ., # 5/10, 2ನೇ ಅಡ್ಡರಸ್ತೆ, ನೆಹರು ನಗರ, ಬೆಂಗಳೂರು–650 020	ಸತ್ತೇಗಾಲ	4.00	ಈ ಸ್ಥಳದಲ್ಲಿ ವಿದ್ಯುತ್ ಉತ್ಪಾದಿಸಲು ಬೇಕಾಗುವ ಯಂತ್ರ ವಿಲ್ಲದಿದ್ದುದರಿಂದ ಹಾಗೂ ತಾಂತ್ರಿಕ ಮಾಹಿತಿಗಳು ಸರಿಯಾಗಿಲ್ಲದಿದ್ದುದರಿಂದ ಅರ್ಜಿಯನ್ನು ತಿರಸ್ಕರಿಸಲಾಯಿತು.
12	ಐಸಿಇಆರ್ ಪವರ್ ಪ್ರೈ. ಲಿ., ಜಿ.ಎನ್.ಆರ್. ಕಾಂಪ್ಲೇಕ್ಸ್, 2ನೇ ಮಹಡಿ, #32–33, 8ನೇ ಅಡ್ಡರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು–27.	ಚಾಮರಾಜನಗರ ಜಿಲ್ಲೆಯ ಬುದಿಕಟ್ಟೆ ಗ್ರಾಮದ ಬಳಿ ಈಗಾಗಲೇ ಇರುವ ರಂಗನಾಥಸ್ವಾಮಿ ಆಣೆಕಟ್ಟಿನ ಬಳಿ ಕಾವೇರಿ ನದಿಗೆ ಅಡ್ಡಲಾಗಿ ಶಿವನಸಮುದ್ರಂ ಜಲಾಶಯದಿಂದ 2 ಕಿ.ಮೀ ಕೆಳತೊರೆಯಲ್ಲಿ	2.00	ತಾಂತ್ರಿಕ ಮಾಹಿತಿಗಳು ಸರಿಯಾಗಿಲ್ಲದಿದ್ದುದರಿಂದ ಅರ್ಜಿಯನ್ನು ತಿರಸ್ಕರಿಸಲಾಯಿತು.